# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 31/2022

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ವೆಂಕಟೇಶಪ್ಪ | ಫ್ರಾಸಾಃ | 13 |
| **ತಂದೆಯ ಹೆಸರುಃ** | ಆಂಜಿನಪ್ಪ | ಚಾಸಾಃ | 14 |
| **ವಯಸ್ಸುಃ** | 55 | ಪ್ರಮಾಣ ವಚನ ಭೋದಿಸಿದ ದಿನಾಂಕ | 16.08.2025 |
| **ಉದ್ಯೋಗಃ** | ಎ ಎಸ್ ಐ | | |
| **ವಾಸ ಸ್ಥಳಃ** | ಚೇಳೂರು | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ13.01.2021 ರಂದು ನಾನು ಶಿಡ್ಲಘಟ್ಟ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದೇವನಹಳ್ಳಿ ಮಾನಸ ಆಸ್ಪತ್ರೆಯಿಂದ ಬಂದ ಮೊಮೆ ಆಧರಿಸಿ ಈ ಪ್ರಕರಣದಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆ ವೈದ್ಯಾಧಿಕಾರಿಗಳ ಮುಂದೆ ಮಾನಸ ಆಸ್ಪತ್ರೆಯಲ್ಲಿ ನಿಪಿ-1 ರಂತೆ ದಾಖಲಿಸಿದೆ. ನಿಪಿ-1 ಬಿ ನನ್ನ ಸಹಿ. ನಂತರ ಠಾಣೆಗೆ ಹಿಂದಿರುಗಿ ನಿಪಿ-19 ರಂತೆ ಪ್ರ.ವ. ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಪಿ-19 ಎ ನನ್ನ ಸಹಿ. ಮಾರನೇ ದಿನ ಘಟನಾ ಸ್ಥಳಕ್ಕೆ ಹೋಗಿ ಚಾಸಾ-3 ರವರು ತೋರಿಸಿಕೊಟ್ಟ ಮೇರೆಗೆ ಸ್ಥಳ ಮಹಜರ್ ನಿಪಿ-4 ರಂತೆ ಜರುಗಿಸಿದ್ದು , ಈ ಪ್ರಕರಣದಲ್ಲಿ ಆರೋಪಿತರು ಬಳಸಿದ್ದ ಕ್ಯಾಂಟರ್ ಹಾಗೂ

ದೂರುದಾರರು ಬಳಸಿದ್ದ ಮಾರುತಿ ಒಮಿನಿ ವಾಹನಗಳನ್ನು ಅಮಾನತುಪಡಿಸಿಕೊಂಡೆ. ಅವುಗಳ ಪೋಟೊ ಈಗ ನೋಡುತ್ತಿದ್ದು ನಿಪಿ-10 ರಿಂದ ನಿಪಿ-13 ಎಂದು ಈಗಾಗಲೇ ಗುರುತಿಸಲಾಯಿತು. ಘಟನಾ ಸ್ಥಳದಲ್ಲಿ ಚಾಸಾ-3 ರವರು ಹಲ್ಲೆ ಮಾಡಲು ಆರೋಪಿತರು ಬಳಸಿದ್ದರೆನ್ನಲಾದ ರಾಡ್ ಮತ್ತು ಚಾಕು ಮು.ಮಾ.1 ಮತ್ತು 2 ನ್ನು ಅಮಾನತುಪಡಿಸಿಕೊಂಡೆ. ನಿಪಿ-4(ಡಿ) ನನ್ನ ಸಹಿ. ಮುಂದಿನ ತನಿಖೆ ಚಾಸಾ-15 ರವರಿಗೆ ವಹಿಸಿದ್ದೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಕೀಲರಿಂದ ಪಾಟೀ ಸವಾಲು</u>**

ಆಸ್ಪತ್ರೆಯಿಂದ ಬಂದ ಮೊಮೊದ ವಿವರಗಳನ್ನು ನಾನು ದಾಖಲಿಸಿಲ್ಲ. ಬೆ.07.30 ಸುಮಾರಿಗೆ ದೇವನಹಳ್ಳಿ ಠಾಣೆಯಿಂದ ನಮಗೆ ಮಾಹಿತಿ ನೀಡಿದ್ದರು. ದೂರುದಾರರ ಹೇಳಿಕೆಯನ್ನು ನಾನೇ ದಾಖಲಿಸಿದ್ದೆ. ಆಕೆ ಕನ್ನಡದಲ್ಲಿ ಮಾಹಿತಿ ನೀಡಿದ್ದಳು. ನಾನು ಹೇಳಿದಂತೆ ಯಾವುದೇ ಮೊಮೊ ಬಂದಿಲ್ಲ , ಎಲ್ಲಿಗೂ ಹೋಗಿಲ್ಲ, ನಿಪಿ-1 ನ್ನು ಠಾಣೆಯಲ್ಲೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ, ಮಹಜರ್ಗೆ ನಾನು ಬೆ.8.00 ಗಂಟೆಗೆ ಹೋಗಿದ್ದೆ. ಸ್ಥಳದಲ್ಲಿ ಚಾಸಾ-7 ಮತ್ತು ಚಾಸಾ-8 ರವನ್ನು ನಾನು ಕರೆದುಕೊಂಡು ಹೋಗಿದ್ದೆ. ಮು.ಮಾ.01 ಮತ್ತು 2 ಕಾರಿನ ಮುಂಭಾಗದಲ್ಲಿ ಬಿದ್ದಿದ್ದವು. ಕಾರು ರಸ್ತೆಯ ಶೇ.30 ಭಾಗ ಆಕ್ರಮಿಸಿಕೊಂಡಿತ್ತು. ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ , ಮು.ಮಾ. ಹಾಗೂ ವಾಹನಗಳನ್ನು ಅಮಾನತುಪಡಿಸಿಕೊಂಡಿಲ್ಲ , ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-4 ನ್ನು ಠಾಣೆಯಲ್ಲಿ ಪ್ರಿಂಟ್ ತೆಗೆದಿದ್ದೇವೆ. ಪಿರ್ಯಾದಿದಾರರಿಗೆ ಸಾಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ.01 ಮತ್ತು 2 ಬಿದ್ದ ಸ್ಥಳದ ಪೋಟೊ ತೆಗೆದಿಲ್ಲ. ವಾಹನಗಳು ಡಿಕ್ಕಿ ಹೊಡೆದಿದ್ದ

ಪೋಟೊಗಳನ್ನು ತೆಗೆದಿದ್ದೇನೆ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 16.08.2025
ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.